ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ದಿಃ**07-08-2021**

**PW-1**

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಜಿ.ಎಮ್. ಬಿ. ವಕೀಲರಿಂದಃ

ವಾದಿ ಹಾಜರಿರುತ್ತೇನೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯ ಮತ್ತು ಸರಿ ಇದ್ದು, ಅವುಗಳನ್ನು ಓದಿ ತಿಳಿದುಕೊಂಡು ಸರಿ ಇದೆ ಎಂದು ತಿಳಿದು ಸಹಿ ಮಾಡಿರುತ್ತೇನೆ ಎಂದು ಪ್ರಮಾಣೀಕರಿಸಿರುತ್ತಾರೆ. ಪಿಡಬ್ಲ್ಯೂ-**1** ಎಂದು ವಿಚಾರಿಸಲಾಯಿತು.

ಸಾಕ್ಷಿಯು ದಾವಾ ಆಸ್ತಿ ನಂ. **43/20** ಸರ್ವೆ ನಂ. ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ಸಾಕ್ಷಿಯು ಅಸಲು ದಾವಾ ನಂ. **2/2019** ರ ತೀರ್ಪು ಹಾಗೂ ಡಿಕ್ರಿ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಕ್ರಮವಾಗಿ ನಿಪಿ-**2** ಮತ್ತು **3** ಎಂದು, ಪಿರ್ಯಾದಿ ಅಜೆಕಾರು ಪೋಲಿಸು ಠಾಣೆಗೆ ನೀಡಿದ ದೂರಿನ ಪ್ರತಿ ಅದರೊಂದಿಗೆ ಪೋಲಿಸ್ ಠಾಣೆಯವರು ನೀಡಿದ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**4** ಎಂದು, ಪ್ರತಿವಾದಿಯವರು ಅಜೆಕಾರು ಪೋಲಿಸ್ ಠಾಣೆಗೆ ನೀಡಿದ ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರು ಸಹಿ, ಹೇಳಿಕೆಯನ್ನು ನೀಡಿಲ್ಲ ಎಂದು ತಕರಾರು ಮಾಡಿದ್ದು ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ-**5** ಎಂದು, ಸಾಕ್ಷಿಯು ಅಜೆಕಾರು ಪೋಲಿಸ್ ಠಾಣೆಗೆಯವರು ಪಿರ್ಯಾದುದಾರರಿಗೆ ನೀಡಿದ ಹಿಂಬರಹದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**6** ಎಂದು, ದಿಃ **19-01-2021** ರಂದು ಅಜೆಕಾರು ಪೋಲಿಸ್ ಠಾಣೆಯವರು ನೀಡಿದ ದೂರು ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**7** ಎಂದು, ದಿಃ **19-01-2021** ರಂದು ಪ್ರತಿವಾದಿಯರು ಅಜೆಕಾರು ಪೋಲಿಸ್ ಠಾಣೆಗೆ ನೀಡಿದ ಹೇಳಿಕೆಯ ದೃಢೀಕೃತ ನಕಲಿಗೆ ಪ್ರತಿವಾದಿ ಪರ ವಕೀಲರು ಸಹಿ, ಹೇಳಿಕೆಯನ್ನು ನೀಡಿಲ್ಲ ಎಂದು ತಕರಾರು ಮಾಡಿದ್ದು ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ-**8** ಎಂದು, ದಿಃ **19-01-2021** ರಂದು ಅಜೆಕಾರು ಪೋಲಸ್ ಠಾಣೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**9** ಎಂದು, ಸಾಕ್ಷಿಯು ಸರ್ವೇ ನಂ.

**43/20** ಸಂಬಂಧಿಸಿದ **11**(ಎ) ಸ್ಕೆಚ್ ಹಾಗೂ ಅದರೊಂದಿಗೆ ಇನ್ಡೆಕ್ಸ್ ಕಂಪ್ಯೂಟರ್ ಪ್ರತಿಯನ್ನು ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-**10** ಎಂದು, ಸಾಕ್ಷಿಯು ಸರ್ವೇ ನಂ. **43/19, 20, 36** ಗೆ ಸಂಬಂಧಿಸಿದ ಎಫ್.ಎಮ್.ವಿ ಸ್ಕೆಚ್ ಕಂಪ್ಯೂಟರ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**11** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯವನ್ನು ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ